Reg. No. | | | | | | | | | |

# BCAKAL 153/BSAKAL 153/BFDKAL 155/BGDKAL 155/BIDKAL 155

**ಗುಣಾಂಕ ಆಧಾರಿತ ಎರಡನೆಯ ಸೆಮಿಸ್ಟರ್ ಬಿ.ಸಿ.ಎ./ಬಿ.ಎಸ್ಸಿ. (ಅನಿಮೇಶನ್ ಮತ್ತು ವಿಶುವಲ್ ಇಫೆಕ್ಟ್)/ಬಿ.ಎಸ್ಸಿ. (ಫ್ಯಾಷನ್ ಡಿಸೈನ್)/ಬಿ.ಎಸ್ಸಿ. (ಗಾರ್ಮೆಂಟ್ ಡಿಸೈನ್)/ಬಿ.ಎಸ್ಸಿ. (ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಶನ್) ಪದವಿ ಪರೀಕ್ಷೆ, ಮೇ/ಜೂನ್ 2016**

**(ಹೊಸ ಪಠ್ಯಕ್ರಮ)**

**(2013 – 14 Batch and Onwards)**

**KANNADA / ADVANCED KANNADA – II**

Time : 3 Hours Max. Marks : 80

**ಭಾಗ - 1**

**(ಕಾವ್ಯ)**

I. ಅ) ಈ ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಕೈಕೆಯ ಪಾತ್ರದಲ್ಲಿ ಅಪರಾಧ ಮತ್ತು ಪಶ್ಚಾತ್ತಾಪಗಳೆಂಬ ಪರಿಕಲ್ಪನೆಗಳು ಹೇಗೆ ಮೂಡಿದೆ? ವಿವರಿಸಿರಿ.

2) ದಾಸಿಮಯ್ಯನ ವಚನಗಳಲ್ಲಿ ವ್ಯಕ್ತವಾಗುವ ದೈವದ ನೆಲೆ ಭಕ್ತಿಯ ಪರಿ ಹಾಗೂ ಡಾಂಭಿಕ ಬದುಕಿನ ಬಗ್ಗೆ ಬರೆಯಿರಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×5=5)**

1) ಕೃಷ್ಣನು ಮಾಯದ ಸೃಷ್ಟಿಯಾಗಿ ಈರುಳ್ಳಿಯನ್ನು ಮಾಡಲು ಕಾರಣವೇನು ? ಅದರ ಪರಿಣಾಮ ಏನು ಎಂಬುದನ್ನು ಕುರಿತು ಬರೆಯಿರಿ.

2) ಮನುಷ್ಯನ ಬದುಕಿನ ಉನ್ನತಿಗೆ ಅಗತ್ಯವಾದ ಅಂಶಗಳನ್ನು ಡಿ.ವಿ.ಜಿ.ಯವರ ಮುಕ್ತಕಗಳು ಹೇಗೆ ವಿವರಿಸುತ್ತವೆ ? ವಿಶ್ಲೇಷಿಸಿರಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. **(2×3=6)**

1) ಮಾಲತಿ ಪಟ್ಟಣಶೆಟ್ಟಿ

2) ಮಾನವನ ಆಸೆ

3) ದಶರಥ

P.T.O.

II. ಅ) **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ, ಮಹತ್ವವನ್ನು ವಿವೇಚಿಸಿರಿ. (1×5=5)

1) ಏನನಿದಂ ನೆನೆದೈಸುತ
ಕಾನನಮಂ ಪೊಗಿ ಪೊಕ್ಕು ಮಂಗಳಗೀತ
ಧ್ವಾನಮಿರೆ ಸಿಂಹಶರಭ
ಧ್ವಾನಮನಾಲಿಸುವ ಮಹಿಮೆಗರ್ತಿಗನಾದೈ.

2) ಶಿವನೆ ಕೈಮುಗಿದು ಬೇಡುವೆನು ನಿನಗೆ
ತವರ ಸಿರಿ ಬೆಳೆಯ ಬರಲಿ ನಮ್ಮಣ್ಣಗೆ
ತಾಯಿ ನೆನಪಿರಲಿ ಮುಂದೆ ಎಂದೆಂದಿಗೂ
ಕಾಯಿ ಕರ್ಪೂರ ತರುವೆ ನಿನ್ನ ಗುಡಿಗೆ.

ಆ) **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ. (2×3=6)

1) ವಸುಧೆಯೊಳಗಾತನೇ ಗಾರುಡಿಗ

2) ವಿಜಯ ಪತಾಕೆಯ ಕೆಳಗೆ ನರಳುತ್ತಿವೆ ವಿಜಯ ಘೋಷಗಳು

3) ಪಡೆಯುವುದೊಂದು ಕೊಡುವುದು ಒಂದು.

III. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. (5×1=5)

1) ನಾಗಚಂದ್ರನು ರಚಿಸಿದ ಎರಡು ಚಂಪೂ ಕಾವ್ಯಗಳು ಯಾವುವು ?

2) ದ್ರೌಪತಿಗೆ ಸಭೆಯಲ್ಲಿ ಅಪಮಾನ ಮಾಡಿದವರು ಯಾರು ?

3) ದಾಸಿಮಯ್ಯನ ವೃತ್ತಿ ಯಾವುದು ?

4) ಚಿ. ಉದಯಶಂಕರ್ ಸಾಹಿತ್ಯ ನೀಡಿದ ಮೊದಲ ಚಲನಚಿತ್ರ ಯಾವುದು ?

5) ಡಿ.ವಿ.ಜಿ.ಯವರ ಜನ್ಮಸ್ಥಳ ಯಾವುದು ?

## ಭಾಗ - 2
## (ಗದ್ಯ)

IV. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. (1×8=8)

1) ಜಲಪ್ರೇತದ ಸಂಭಾಷಣೆಯಿಂದ ತಿಳಿದು ಬರುವ ಕೆರೆಯ ಉನ್ನತಿ ಅವನತಿಗಳನ್ನು ವಿಶ್ಲೇಷಿಸಿರಿ.

2) ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳು ಲೇಖಕರು ಆಶಿಸಿದ್ದಾರೆ. ವಿವರಿಸಿರಿ.

ಆ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ರಾಜಕೀಯ ಮತ್ತು ಧರ್ಮ ಪರಸ್ಪರ ಹೇಗೆ ಬೆಸೆದುಕೊಂಡಿವೆ ? ವಿವೇಚಿಸಿರಿ.

2) ಭಾಗವತ ಮಹಾತ್ಮೆಯ ಪ್ರಸಂಗಗಳನ್ನು ಲಕ್ಷ್ಮೀಶ ತೊಳ್ಪಾಡಿಯವರು ತಮ್ಮ ಪ್ರಬಂಧದಲ್ಲಿ ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

V. ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×5=5)**

1) ವಿರಹಿಗಳ ಶೃಂಗಾರ ಯೋಗೀಶ್ವರರ ತತ್ವವಿಚಾರ ಪ್ರಬಂಧದ ಸ್ವಾರಸ್ಯವನ್ನು ಸಾದರಪಡಿಸಿರಿ.

2) ಪುರುಷ ದೌರ್ಜನ್ಯದ ಬಗ್ಗೆ ಭವ್ರಿದೇವಿ ತಳೆದ ನಿಲುವುಗಳನ್ನು ವಿವರಿಸಿ ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ: **(4×1=4)**

1) ಕವಿಗಳು ತಿಳಿನೀರಿನ ಸೊಗಸನ್ನು ಹೆಚ್ಚಿಸಲು ಏನು ಮಾಡಿದರು ?

2) ಮರಕಟುಕನೆ ದೂರ ಸರಿ ಎಂಬ ಮಾತನ್ನು ಹೇಳಿದವರ್ಯಾರು ?

3) ಅಶೋಕನ ತಂದೆಯ ಹೆಸರೇನು ?

4) ವೇದವ್ಯಾಸನು ಮಹಾಭಾರತದ ಕಥೆಯನ್ನು ಯಾರಿಂದ ಬರೆಸಿದನು ?

## ಭಾಗ – 3
## (ನಾಟಕ)

VII. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ವರುಣನು ಹರಿಶ್ಚಂದ್ರನ ಬಗ್ಗೆ ಕೋಪಗೊಂಡ ಪ್ರಸಂಗದ ಪರಿಣಾಮಗಳೇನು ? ವಿಶ್ಲೇಷಿಸಿರಿ.

2) ಆಂದ್ರಕನ ಪಾತ್ರ ವಿಶೇಷತೆಯನ್ನು ಕುರಿತು ಬರೆಯಿರಿ.

ಆ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×6=6)**

1) ವಿಶ್ವಾಮಿತ್ರನು ಶುನಶ್ಯೇಪನನ್ನು ಬಲಿ ನೀಡಬೇಕಾದ ಸಂದರ್ಭದ ಹಿನ್ನಲೆ ಹೇಗಿತ್ತು ? ವಿವರಿಸಿರಿ.

2) ಶುನಶ್ಯೇಪನ ಪಾತ್ರವನ್ನು ಕುರಿತು ಬರೆಯಿರಿ.

VIII. ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ. (2×2=4)

1) ಸಂಸಾರ ಕಟ್ಟಿಕೊಂಡ ಮೇಲೆ ಸಾಕ ಬೇಡವೇ ?

2) ನನ್ನನ್ನು ಹೊಗಳಿ ಹೊನ್ನ ಶೂಲಕ್ಕೆ ಇಕ್ಕಿದಿರಿ.

3) ಒಂದರ ಮುಕ್ತಾಯದಲ್ಲೇ ಇನ್ನೊಂದರ ಆರಂಭವಿದೆ ಎಂದು ನೀನು ಸೂಚಿಸಿದೆ.

IX. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (2×1=2)

1) ಹರಿಶ್ಚಂದ್ರನ ಪತ್ನಿಯ ಹೆಸರೇನು ?

2) ಶುನಶ್ಯೇಪವನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿದವರು ಯಾರು ?

---